ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 29-33
©*IIMRD*, Mysuru
IIMRD JOURNALS
www.iimrd.com

# ಶಾಸನಗಳಲ್ಲಿ ಕಂಡಂತೆ ಕರ್ನಾಟಕದಲ್ಲಿ ಬೌದ್ಧಧರ್ಮದ ಬೆಳವಣಿಗೆ: ಒಂದು ಅವಲೋಕನ

**ಅರುಣ್ ಕುಮಾರ್ ಡಿ. ಎ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಕರ್ನಾಟಕದಲ್ಲಿ ಶಾಸನ ಸಂಪತ್ತು ಹೇರಳವಾಗಿದೆ. ಇತಿಹಾಸ ಮತ್ತು ಸಂಸ್ಕೃತಿಯನ್ನು ಅಭ್ಯಾಸ ಮಾಡುವ ಆಸಕ್ತರಿಗೆ ಶಾಸನಗಳು ಅತ್ಯಂತಹ ಮುಖ್ಯವಾದ ಆಕರಗಳಾಗಿವೆ. ಅದರಲ್ಲೂ ಬೌದ್ಧ ಧರ್ಮದ ಬಗ್ಗೆ ಸಂಶೋಧನೆ ಹಾಗೂ ಅಧ್ಯಯನ ಮಾಡುವಾಗ ಸಾಹಿತ್ಯ ಆಕರಗಳ ಕೊರತೆ ಎದುರಾಗುತ್ತದೆ. ಶಾಸನಗಳು ಬೌದ್ಧ ಚರಿತ್ರೆಯನ್ನು ಕಟ್ಟಲು ಮತ್ತು ಅಭ್ಯಾಸಿಸಲು ಮಹತ್ತರವಾದ ಕುರುಹುಗಳಾಗಿವೆ. ಕರ್ನಾಟಕದ ಶಾಸನಗಳ ಅಧ್ಯಯನ ಪ್ರಾರಂಭವಾಗುವುದೇ ಅಶೋಕನ ಶಿಲಾಶಾಸನಗಳಿಂದ ಎಂದು ಹೇಳಬಹುದು. ಅಂತಹ ಶಾಸನಗಳು ಕರ್ನಾಟಕದಲ್ಲಿ ದೊರಕಿದ್ದು, ಅವುಗಳ ಆಶಯವೂ ಬೌದ್ಧ ಧರ್ಮದ ಪ್ರಸಾರವೇ ಆಗಿರುವುದು ಮಹತ್ತರದ್ದಾಗಿದೆ. ಮುಖ್ಯವಾಗಿ ಮಸ್ಕಿ, ಜಟಿಂಗ ರಾಮೇಶ್ವರ, ಸಿದ್ದಾಪುರ, ಬ್ರಹ್ಮಗಿರಿ, ಸನ್ನತಿ ಹೀಗೆ ಇನ್ನೂ ಹಲವೆಡೆ ಬುದ್ಧನಿಗೆ ಸಂಬಂಧಿಸಿದ ಶಾಸನಗಳು ದೊರಕಿವೆ. ಕರ್ನಾಟಕದ ನೆಲದಲ್ಲಿ ಬೌದ್ಧಧರ್ಮ ಬೆಳವಣಿಗೆಯಾದ ಬಗೆಯನ್ನು ಈ ಶಾಸನಗಳು ಉಲ್ಲೇಖಿಸುತ್ತವೆ. ಇವು ಬೌದ್ಧ ಸಾಹಿತ್ಯಕ್ಕೆ ಸಂಬಂಧಿಸಿದ ಬಹುಮುಖ್ಯ ಆಕರಗಳಾಗಿವೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಬೌದ್ಧ ಧರ್ಮ, ಶಾಸನಗಳು, ಗೌತಮ ಬುದ್ಧ*

## ಪೀಠಿಕೆ

ಕರ್ನಾಟಕದಲ್ಲಿ ಬೌದ್ಧಧಮ್ಮದ ಅತ್ಯಂತ ಪ್ರಾಚೀನ ಕುರುಹುಗಳೆಂದರೆ, ಮಧ್ಯ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ, ಜಟಿಂಗ ರಾಮೇಶ್ವರ, ಬ್ರಹ್ಮಗಿರಿಗಳಲ್ಲಿ, ಉತ್ತರ ಕರ್ನಾಟಕದ ಮಸ್ಕಿ ಮತ್ತು ಕೊಪ್ಪಳಗಳಲ್ಲಿ ಸಿಕ್ಕಿರುವ ಅಶೋಕನ ಕ್ರಿ.ಪೂ. ಮೂರನೇ ಶತಮಾನದ ಶಾಸನಗಳು. ಹಾಗೂ ಕ್ರಿ.ಶ. ಆರಂಭದ ಶತಮಾನಗಳಿಗೆ ಸೇರುವ ಗುಲ್ಬರ್ಗ ಜಿಲ್ಲೆಯ ಸನ್ನತಿಯ ಸುಮಾರು ಮೂವತ್ತಕ್ಕೂ ಮೀರಿದ ಚಿಕ್ಕ ಚಿಕ್ಕ ಪ್ರಾಕೃತ ಶಾಸನಗಳು ಬೌದ್ಧ ಧಮ್ಮಕ್ಕೆ ಸಂಬಂಧಿಸಿವೆ. ಕ್ರಿಸ್ತಶಕದ ಆರಂಭದಲ್ಲಿ ಆ ಭಾಗವನ್ನು ಆಳುತ್ತಿದ್ದ ಶಾತವಾಹನರು ಬೌದ್ಧ ಧಮ್ಮಾನುಯಾಯಿಗಳಾಗಿದ್ದರು. ಕನಗಾನಹಳ್ಳಿಯಲ್ಲಿ (1994 ರಿಂದ 1998) ಉತ್ಖನನದ ಸಮಯದಲ್ಲಿ, ಬೃಹತ್ ಸ್ತೂಪದ ಅವಶೇಷಗಳು ಕಂಡುಬಂದಿವೆ, ಚೈತ್ಯಗೃಹ ಮತ್ತು ಸ್ಮಾರಕ ಸ್ತೂಪಗಳ ರೂಪದಲ್ಲಿ ಅನೇಕ ಇಟ್ಟಿಗೆ ರಚನೆಗಳು ಬೆಳಕಿಗೆ ಬಂದವು.[1]

*Please cite this article as:* ಅರುಣ್ ಕುಮಾರ್ ಡಿ. ಎ. (2026). ಶಾಸನಗಳಲ್ಲಿ ಕಂಡಂತೆ ಕರ್ನಾಟಕದಲ್ಲಿ ಬೌದ್ಧಧರ್ಮದ ಬೆಳವಣಿಗೆ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 29–33

ಈ ಲೇಖನವನ್ನು ಸಿದ್ಧಪಡಿಸಲು ಪ್ರಾಥಮಿಕ ಆಕರಗಳು ಮತ್ತು ಮಾಧ್ಯಮಿಕ ಆಕರಗಳನ್ನು ಬಳಸಲಾಗಿದೆ. ಹಾಗೆಯೇ ಧಮ್ಮವೀರ ಭಂತೇಜಿರವರನ್ನು ಸಂದರ್ಶನ ಮಾಡಿ ಲೇಖನ ಸಿದ್ದಪಡಿಸಲಾಗಿದೆ.

ಕ್ರಿಸ್ತಶಕ. 1888ರಲ್ಲಿ ನಡೆದ ಚಂದ್ರವಳ್ಳಿಯ ಭೂ ಶೋಧನೆಯಲ್ಲಿ ದೊರೆತ ಸೀಸದ ನಾಣ್ಯಗಳೂ ಗಮನಾರ್ಹವಾಗಿವೆ. ಅವುಗಳಲ್ಲಿ ಒಂದು ಕಡೆ ಒಳ್ಳೆ ಮದಿಸಿದ ಗೂಳಿಯ ಚಿತ್ರ ಅದರ ಸುತ್ತ ಆಂಧ್ರರ ರಾಯಭಾರಿಯಾಗಿದ್ದ **"ಸದಕನ ಕಲಲಾಯ ಮಹಾರಥಿಶ"** ಎಂಬ ಸಾತಕರ್ಣಿ ರಾಜನ ಹೆಸರು ಇದೆ. ಆ ನಾಣ್ಯಗಳ ಇನ್ನೊಂದು ಮಗ್ಗುಲಲ್ಲಿ ಖಚಿತವಾಗಿ ಬೌದ್ಧ ಸಂಕೇತಗಳು ಎಂದು ಹೇಳಬಹುದಾದ ಬೋಧಿವೃಕ್ಷ ಮತ್ತು ಸ್ತೂಪದ ಚಿತ್ರವಿದೆ. ಹೀಗೆ ಕ್ರಿಸ್ತಶಕ ಆರಂಭದ ಶತಕಗಳಲ್ಲಿ ಬೌದ್ಧಧಮ್ಮವು ರಾಜಾಶ್ರಯವನ್ನು ಪಡೆದಿದ್ದಿತು.

ಬನವಾಸಿಯ ಕ್ರಿಸ್ತಶಕ ಮೂರನೆಯ ಶತಮಾನದ ಪ್ರಾಕೃತ ಶಾಸನದಲ್ಲಿ ಚುಟುಕುಲದ ಸಾತಕಣ್ಣಿಯ ಮಗಳು ಬನವಾಸಿಯಲ್ಲಿ "ನಾಗ"ವನ್ನೂ, ಕೆರೆಯನ್ನೂ, ಒಂದು ವಿಹಾರವನ್ನೂ ದಾನಮಾಡಿದಳೆಂದು ಹೇಳಿದೆ. ಕ್ರಿಸ್ತಶಕ ನಾಲ್ಕನೇ ಶತಮಾನದ ತಾಮ್ರಪಟವೊಂದು 'ಓಂ ನಮಃ ಸಿವಾಯ (ಇಲ್ಲಿ "ಸಿವ" ಎಂದರೆ ಅವಲೋಕಿತೇಸ್ವರ)' ಎಂದು ಆರಂಭವಾಗಿ, ಮಧ್ಯದಲ್ಲಿ ರಾಜನನ್ನು **"ಪ್ರಾಣಿಗಳಿಗೆ ದಯೆತೋರುವುದರಲ್ಲಿ ಬೋಧಿಸತ್ವನನ್ನು ಹೋಲುವನು"** (ಪ್ರಾಣಿನಾಂ ಪರಮಕಾರುಣಿಕತಯಾ ಬೋಧಿಸತ್ತೋಪಮಾನಸ್ಯ') ಎಂದು ಹೊಗಳಿದೆ. ಅದೇ ಶತಮಾನದ ಮತ್ತೊಂದು ತಾಮ್ರಪಟದಲ್ಲಿ ಗಂಗಕುಲದ ಮಾಧವ ಶರ್ಮನು ಬೌದ್ಧವಿಹಾರಕ್ಕೆ ಭೂಮಿಯನ್ನು ದಾನಮಾಡಿದ ವಿಷಯಬಂದಿದೆ.

ಆ ಶಾಸನದಲ್ಲಿ ಹೊಲದ ಮೇರೆಯನ್ನು ಹೇಳುವಾಗ 'ಶಾಕ್ಯಶಿಲಾ' ಎಂಬ ಮಾತು ಬರುತ್ತದೆ. ಬೌದ್ಧದತ್ತಿಗಳ ಮೇರೆಯ ಕಲ್ಲುಗಳಿಗೆ 'ಶಾಕ್ಯಶಿಲಾ' ಎಂಬ ಹೆಸರಿತ್ತು (ಬುದ್ಧರು ಶಾಕ್ಯವಂಶದವರು ಎಂಬುದನ್ನು ಇಲ್ಲಿ ನೆನೆಯಬಹುದು).

ಶಾಸನದ ಕೊನೆಯಲ್ಲಿ "ಇತಿ ಯಸ್ಮಿನ್ ಗಾಂಗೇಯರಾಜ್ಯ ತಸ್ಮಿನ್ ಶ್ರೀ ಮಾಧವ ಶ್ರಮಣಃ ಶಾಸನಬುದ್ಧ ಸತ್ವಾಯ ದತ್ತ ಮಾಚಂದ್ರಾರ್ಕತಾರಕ' ಎಂದಿದೆ. ಅದೇ ಕಾಲದ ಪಶ್ಚಿಮ ಕರ್ನಾಟಕದ ತಾಮ್ರಪಟದು ಆರಂಭದಲ್ಲಿ **'ನಿಷ್ಕಾರಣವತ್ಸಲ'** ಬುದ್ಧರನ್ನು ಪ್ರಾರ್ಥಿಸಿ 'ವಿಹಾರ' ಮತ್ತು 'ಆರ್ಯಭಿಕ್ಷು ಸಂಘ'ಗಳಿಗೆ ದೀಪಕ ಎಂಬ ನಾಡಿನಲ್ಲಿ ಸುಂದರಿಕಾ ಎಂಬ ಹೆಸರಿನ ಗ್ರಾಮವನ್ನು ದಾನವಾಗಿ ಕೊಡಲಾಗಿದೆ. ಈ ದೀಪಕ (< ದ್ವೀಪ) ಎಂಬುದು ಕಾರವಾರ ಸಮೀಪದ ಅಂಜಿದಿನ್, ಅಥವಾ ಗೋವಾ ಸಮೀಪದ 'ದೀವರ್' ಇರಬಹುದು. ಕರ್ನಾಟಕದ ಪಶ್ಚಿಮಕ್ಕಿರುವ ಗೋವಾದಲ್ಲಿ ಧ್ಯಾನ ಭಂಗಿಯಲ್ಲಿರುವ ಬುದ್ಧರ ಪ್ರತಿಮೆ ಸಿಕ್ಕಿದೆ. ಈ ಪ್ರತಿಮೆ ಕ್ರಿಸ್ತಶಕದ ಆರಂಭಕ್ಕೆ ಸೇರಿದೆ ಎಂದು ಹೇಳಲಾಗಿದೆ.

ಸಿಲೋನಿ (ಶ್ರೀಲಂಕಾ)ನ ಭಿಕ್ಷುಗಳು ಬನವಾಸಿ ಪ್ರಾಂತದಲ್ಲಿ ಬೌದ್ಧಧಮ್ಮವನ್ನು ಪ್ರಚಾರ ಮಾಡಿದರೆಂದು ನಾಗಾರ್ಜುನಕೊಂಡದ (ಕ್ರಿಸ್ತಶಕ 3ನೇ ಶತಮಾನ) ಶಾಸನದಲ್ಲಿ ಹೇಳಿದೆ. ಹ್ಯುಯೆನ್ ತ್ಸಾಂಗನ ಪ್ರಕಾರ ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಬನವಾಸಿಯಲ್ಲಿ ನೂರು ಬೌದ್ಧ ಸಂಘಾರಾಮಗಳಿದ್ದುವು. ಹತ್ತು ಸಾವಿರ ಭಿಕ್ಷುಗಳಿದ್ದರು, ಅವರು ಹೀನಯಾನ, ಮಹಾಯಾನ ಎರಡೂ ಪಂಥಗಳನ್ನು ಅನುಸರಿಸುತಿದ್ದರು. ಕಾರ್ಲಾ,

ಕನ್ಹೇರಿ ಮುಂತಾದ ಕಡೆ ಬೌದ್ಧ ಗುಹೆಗಳ ರಚನೆಗೆ ಬನವಾಸಿಯ ಕನ್ನಡ ವರ್ತಕರು ಬೇಕಾದಷ್ಟು ದಾನ ಮಾಡಿರುವುದು ತಿಳಿದುಬರುತ್ತದೆ. ಬನವಾಸಿ ಕರ್ನಾಟಕದ ಪ್ರಮುಖ ಬೌದ್ಧ ಕೇಂದ್ರವಾಗಿತ್ತು ಎನ್ನುವುದು ಇದರಿಂದ ಸಿದ್ಧವಾಗುತ್ತದೆ.

ಕದಂಬ ರವಿವರ್ಮನ ಕಾಲದ ಕ್ರಿಸ್ತಶಕ. 485 ರ ಹೊನ್ನಾವರ ತಾಮ್ರ ಶಾಸನವು, "ಸಿದ್ದಂ ಜಯತ್ವಮಿಕ್ ಗುಣಭದ್ರ ಬುದ್ಧ ಸ್ವಸಮಾಶ್ರಯಃ ಶುದ್ಧೋಧನ ಕುಲೋದ್ಭತ ಪದ್ಮಪತ್ರ ನಿಭೆಕ್ಷಣಃ" ಎಂದು ಬುದ್ಧನ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಕದಂಬ ರವಿವರ್ಮನ ಆಳ್ವಿಕೆಯ ಕಾಲದಲ್ಲಿ ಕೈಕೇಯ ವಂಶಜ ಚಿತ್ರಸೇನ ಮಹಾಕೆಲ್ಲನು ಅಂಬುದ್ವೀಪದ ಕಣಸಪುಕ್ಕೊಳಿ ಎಂಬ ಹೊಲವನ್ನು ಮತ್ತು ನಾಪಿತಪಲ್ಲಿಯ ತೋಟವನ್ನು ಆಶ್ವಿಜ ಮಾಸದ ಹುಣ್ಣಿಮೆಯ ದಿನದಂದು ಆರ್ಯ ಭಿಕ್ಷು ಸಂಘಕ್ಕೆ ದಾನ ನೀಡಿದನು. ಇಲ್ಲಿ ಆರ್ಯ ಭಿಕ್ಷು ಸಂಘವು ಬೌದ್ಧಧಮ್ಮದ ಮಹಾಯಾನ ಪರಂಪರೆಗೆ ಸೇರಿದ್ದು. ಕರಾವಳಿಯಲ್ಲಿ ಆರ್ಯ ಭಿಕ್ಷು ಸಂಘವು ಚಟುವಟಿಕೆಗೆ ಭೋಜ ಅಶಂಕಿತ ರಾಜನ ಹೀರೇಗುತ್ತಿ ಶಾಸನ ರುಜುಮಾಡುತ್ತದೆ. ಬುದ್ಧರ ಸ್ತುತಿಯೊಂದಿಗೆ ಆರಂಭವಾಗುವ ಈ ತಾಮ್ರಪಟ ಶಾಸನ ದೀಪಕ ವಿಷಯದಲ್ಲಿದ್ದ ಸುಂದರಿಕಾ ಗ್ರಾಮವನ್ನು ಆರ್ಯ ಭಿಕ್ಷು ಸಂಘಕ್ಕೆ ದಾನ ನೀಡಿದ್ದನ್ನು ಪ್ರಕಟಿಸುತ್ತದೆ. ಕೊನೆಯಲ್ಲಿ ಚೈತ್ಯಾಲಯದ ರಕ್ಷಣೆ ಮತ್ತು ಆರ್ಯ ಭಿಕ್ಷು ಸಂಘದ ಉತ್ಕರ್ಷವನ್ನು ಬಯಸಿ ಶುಭ ಹಾರೈಸಿದೆ. ಅಂಕೋಲಾ ತಾಲೂಕಿನ ಬಬ್ರುವಾಡದ ಧ್ಯಾನಮುದ್ರೆಯಲ್ಲಿರುವ ಸುಮಾರು 5 ನೇ ಶತಮಾನದ ಬುದ್ದರ ವಿಗ್ರಹವು ಉಲ್ಲೇಖನೀಯ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಉತ್ತರಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಬೌದ್ಧಧಮ್ಮದ ಮಹಾಯಾನ ಪರಂಪರೆ ಪ್ರಭಾವಿಯಾಗಿತ್ತು.

ಕೊಪ್ಪಳದಲ್ಲಿ ಅಶೋಕನ ಎರಡು ಶಾಸನಗಳು ಸಿಕ್ಕಿರುವುದಲ್ಲದೆ, ಹೂಯೆನ್‌ತ್ಸಾಂಗನ ಪ್ರಕಾರ ಅದು ಅವನ ಕಾಲದಲ್ಲಿ ಬೌದ್ಧ ಕೇಂದ್ರವಾಗಿತ್ತು. ಅವನು ಅದನ್ನು 'ಕೊಂಕಿನಪುಲೊ' ಎಂದು ಕರೆಯುತ್ತಾನೆ. ಚಕ್ರವರ್ತಿ ಜಯಸಿಂಹನ ಸೋದರಿಯಾದ ಅಕ್ಕಾದೇವಿ 'ಜಿನಬುದ್ಧಾನಂತ ರುದ್ರಾಗಮ ನಿಗದಿತ ಧರ್ಮಂಗಳಂ ಮಾಡಿ'ದಂತೆ ಶಾಸನವೊಂದು ತಿಳಿಸುತ್ತದೆ. ಕಾಳಾಮುಖ ಶೈವದ ಗುರುಗಳೊಬ್ಬರನ್ನು 'ಸುಗತಶಾಸ್ತ್ರೀ ಸೌಗತಾನಾಂ ಗುರುಃ' ಎಂದು ಹೊಗಳಲಾಗಿದೆ. ಪಾಶುಪತಾಚಾರರೊಬ್ಬರನ್ನು 'ಬೌದ್ಧ ಧ್ವಾನ ಭಾನವೇ' ಎಂದು ಅರ್ಥೈಸಿದ್ದಾರೆ. [2] ತಾರಾದೇವಿಯ ಪ್ರಾರ್ಥನೆಯೊಂದಿಗೆ ಆರಂಭವಾಗುವ ಈ ಶಾಸನದಲ್ಲಿ ಲೊಕ್ಕಿಗುಂಡಿಯ ವಡ್ಡ ವ್ಯವಹಾರಿ ಸಂಗವಯ್ಯ ಸೆಟ್ಟಿಯರು ಕಟ್ಟಿಸಿದ ಆರ್ಯ ತಾರಾದೇವಿಯ ವಿಹಾರಕ್ಕೂ, ಅಲ್ಲಿಯ ಹದಿನಾರು ಶೆಟ್ಟಿ ಗಳು ಮಾಡಿಸಿದ ಬೌದ್ಧ ವಿಹಾರಕ್ಕೂ, ಅಲ್ಲಿನ ಪೂಜಾದಿಗಳಿಗೂ ಭಿಕ್ಷುಗಳಿಗೂ ದಾನವನ್ನು ಬಿಡಲಾಗಿದೆ. ಇದು ಬೌದ್ಧ ಶಾಸನವೆಂಬುದು ಅತಿಸ್ಪಷ್ಟ, ಈ ಶಾಸನ (IA. X. p. 185) 'ನಮೋ ಬುದ್ಧಾಯ' ಎಂದು ಆರಂಭವಾಗುತ್ತದೆ.

ಕ್ರಿ.ಶ. 1104 ರ ಶಾಸನವೊಂದರಲ್ಲಿ ಮುಳ್ಳುಂದದ ವೀರನಾರಾಯಣಸ್ವಾಮಿಯ ಸ್ಥಾನವನ್ನಾಳುತ್ತಿದ್ದ ಸನ್ಯಾಸಿಯೊಬ್ಬನನ್ನು 'ಬೌದ್ಧ ಮದೇಭ ಪಂಚಾನನ' ಎಂದು ಕರೆದಿದೆ. ತೇರದಾಳದಲ್ಲಿ ಶಂಕರ, ಜಿನರಿಗೆ ದೇವಾಲಯಗಳಿದ್ದಂತೆ ಬುದ್ಧರಿಗೂ ಇದ್ದಿತೆಂದು ತಿಳಿದುಬರುತ್ತದೆ. ಅಲ್ಲಿಯ ಗಾವುಂಡರು ಚತುಸ್ಸಮಯಗಳನ್ನು ರಕ್ಷಿಸುತ್ತಿದ್ದರು ಎಂದು ಅದೇ ಶಾಸನದಲ್ಲಿ ಉಕ್ತವಾಗಿದೆ. ತುಮಕೂರು ಜಿಲ್ಲೆಯ

ಕೈದಾಳದ ಶಾಸನದ ಪ್ರಾರ್ಥನಾಪದ್ಯದಲ್ಲಿ ಶಿವ, ಬ್ರಹ್ಮ, ಸುಗತ–ಬುದ್ಧ), ವಿಷ್ಣು, ಜಿನ ಇವೆಲ್ಲ ಪರಮಾತ್ಮನಿಗೆ ಬೇರೆ ಬೇರೆ ಹೆಸರುಗಳು ಎಂದು ಹೇಳಿದೆ. ಹನ್ನೆರಡನೆಯ ಶತಮಾನದ ಬ್ರಹ್ಮಶಿವ, ತನ್ನ ಸಮಯಪರೀಕ್ಷೆಯಲ್ಲಿ ತಂಗೂಳನ್ನು ಉಣ್ಣುವ ಬೌದ್ಧರನ್ನು, ಮದ್ಯಮಾಂಸಾದಿಗಳಲ್ಲಿ ನಿರತರಾದ ಕೌಳರನ್ನು ಅಪಹಾಸ್ಯಮಾಡಿದ್ದಾನೆ.

ಈ ಕೌಳರು ಸರ್ವದೇವತಾ ಪುರುಷರಿಂದ ಅರ್ಚಿತಳಾದ ಚಂಡಿಯನ್ನು ಪೂಜಿಸುತ್ತಿದ್ದರು. ಈ ಕೌಳರು ಬೌದ್ಧರ ತಾಂತ್ರಿಕ ಪಂಥದ ಒಂದು ಶಾಖೆಯಾಗಿದ್ದರೂ ಆಗಿರಬಹುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಬ್ರಹ್ಮಶಿವನೇ, ಮತ್ತೊಂದೆಡೆ ಚೇಳಿನರೂಪದಲ್ಲಿ ಜನನಿಯ ಗರ್ಭವನ್ನು ಸೀಳಿ ಹೊರಗೆ ಬಂದ ಬುದ್ಧನು ಸಕಳವನ್ನು ತ್ಯಜಿಸಿದರೂ ಕಷಾಯವಸ್ತ್ರದ ಮೋಹವನ್ನು ಮಾತ್ರ ಅವನಿಂದ ಬಿಡಲಾಗಲಿಲ್ಲವಲ್ಲಾ ಎಂದು ಕೊರಗಿದ್ದಾನೆ. ಅಲ್ಲಮನು ಸಾತ್ವಿಕ ಭಕ್ತಿಯನ್ನು ಪ್ರತಿಪಾದಿಸುವ, ತಂತ್ರವನ್ನು ಟೀಕಿಸುವ ತನ್ನ ವಚನವೊಂದರಲ್ಲಿ ಹೀಗೆ ಹೇಳಿದ್ದಾನೆ "ಹಠಯೋಗ ಲಂಬಿಕೆಯೆಂದು ಆಕುಂಚನವೆಂದು, ವಜ್ರಿ ಅಮರಿಯ ಕಲ್ಪವೆಂದು ಮಲಮೂತ್ರಂಗಳಂ ಸೇವಿಸುತ ಇದು ಪೂರ್ವ ನವನಾಥಸಿದ್ಧರ ಮತೋಕ್ತವೆಂದು ಕಾಪಾಲಿಕಾಚರಣೆಯನಾಚರಿಸುವರೆಲ್ಲ ಶರಣರು". ಇಲ್ಲಿ ಬರುವ 'ವಜ್ರಿ ಅಮರಿ' ಬೌದ್ಧಧಮ್ಮದ ತಂತ್ರಯಾನದ ಆರಾಧ್ಯದೇವಿಗಳಲ್ಲೊಬ್ಬಳು.[3]

ಹನ್ನೆರಡನೇ ಶತಮಾನದ ಹೊಯ್ಸಳ ದೇವಸ್ಥಾನಗಳಲ್ಲಿ ಬುದ್ಧರ ವಿಗ್ರಹಗಳು (ವಿರಳವಾಗಿ ಉಷ್ಣಿಷವಿಲ್ಲದ ವಿಗ್ರಹಗಳು) ದೊರಕುತ್ತವೆ. ಬುದ್ಧರನ್ನು ವೈದಿಕರು ವಿಷ್ಣುವಿನ ಅವತಾರವೆಂದು ಭಾವಿಸಿ ತಮ್ಮ ದೇವತೆಗಳೆಲ್ಲಾಗಲೇ ಸೇರಿಸಿಕೊಂಡಿದ್ದರು. ಬಿಜಾಪುರ ಜಿಲ್ಲೆಯ ಶಾಸನವೊಂದರಲ್ಲಿ ಮಹಾಮಂಡಲೇಶ್ವರ ವಿರುಪರಸನು ಬೌದ್ಧ ಮೊದಲಾದ ಅನ್ಯಮತೀಯರನ್ನು ನಾಶಪಡಿಸಿ ಶೈವರ ಪ್ರಶಂಸೆಗೆ ಪಾತ್ರನಾದನೆಂದು ಹೇಳಿದೆ. 'ಬೌದ್ಧ ವಾಡಿಗೆ' ಎಂಬ ಹೆಸರಿನ ಬಡಾವಣೆ ಏಳಾಪುರ ಎಂಬ ಅಗ್ರಹಾರದಲ್ಲಿದ್ದ ಸಂಗತಿಯನ್ನು ಒಂದು ಶಾಸನ ತಿಳಿಸುತ್ತದೆ (SII. XV. 153, 1191 A.D.) ಅಲ್ಲಿ ಬೌದ್ಧರೇ ವಿಶೇಷವಾಗಿ ವಾಸಿಸುತ್ತಿದ್ದರೆಂದು ಕಾಣುತ್ತದೆ.

ಕ್ರಿ.ಶ. 1196ರಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಿಕ್ಕಿಂಡಿಯಲ್ಲಿ ಬೌದ್ಧಾಲಯವೂ ಬೌದ್ಧರೂ ಇದ್ದರೆಂದು ಒಂದು ಶಾಸನ ತಿಳಿಸುತ್ತದೆ. ಹದಿಮೂರನೇ ಶತಮಾನದ ಸಂಸ್ಕೃತ ಶಾಸನವಿರುವ ತಾರಾದೇವಿಯ ವಿಗ್ರಹವೊಂದು ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದಲ್ಲಿ ಸಿಕ್ಕಿದೆ. ಹೀಗೆ ಬೌದ್ಧಧಮ್ಮದ ಅವಶೇಷಗಳು ಶಾಸನಗಳ ದ್ವಾರ ಸಿಕ್ಕಿ ಬೌದ್ಧ ಧರ್ಮದ ಚರಿತ್ರೆಯನ್ನು ಒಟ್ಟುಗೂಡಿಸಲು ಸಹಾಯಕವಾಗಿದೆ. ಮಸ್ಕಿಯ ಶಾಸವು "ದೇವನಂಪ್ರೀಯದರ್ಶಿನಿ ಆಶೋಕ ಎಂಬ ಉಲ್ಲೇಖವಿದ್ದು ಇದು ಆಶೋಕನು ಬೌದ್ಧಧರ್ಮದ ಪ್ರಸರಣೆಗೆ ಎಲ್ಲಾ ಬಗೆಯ ಪ್ರಯತ್ನಗಳು ಮಾಡಿದ್ದರು ಎಂಬುದನ್ನು ನಾವಿಲ್ಲಿ ಮನಗಾಣಬಹುದಾಗಿದೆ.

1993–94 ರಲ್ಲಿ ಸನ್ನತಿಯಲ್ಲಿ ಉತ್ಖನನ ಮಾಡುವಾಗ ಮೌರ್ಯರ ಕಾಲದ ಕಪ್ಪು ಬಣ್ಣದ ಮೃತ್‌ಪಾತ್ರೆಗಳ ಚೂರುಗಳು ದೊರೆತಿವೆ. ಅಶೋಕನು ಬೌದ್ಧ ಧರ್ಮದ ಪ್ರಚಾರಕ್ಕೆ ಬನವಾಸಿಗೆ ಕಳುಹಿಸಿದ್ದನು.[4] ಹಾಗೆಯೇ ಅಶೋಕನ ಕಾಲದ ಶಾಸನಗಳು ಸಿಕ್ಕಿರುವುದರಿಂದ ಈ ಸ್ಥಳವು ಪ್ರಮುಖ ಬೌದ್ಧ

ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಬೌದ್ಧ ಧರ್ಮವು ಈ ಭೂ ಭಾಗಗಲ್ಲಿ ಹರಡಿಕೊಂಡಿತ್ತು ಎಂದು ಹೇಳಬಹುದು.

**ಉಪಸಂಹಾರ**

ಶಾಸನಗಳು ಭಾರತದ ಇತಿಹಾಸದ ಕಾಲಗಣನೆಯನ್ನು ನಿರ್ಧರಿಸಲು ಇರುವ ಬಹುಮುಖ್ಯವಾದ ಆಕರಗಳಾಗಿವೆ. ಕರ್ನಾಟಕದಲ್ಲಿಯೂ ಅನೇಕ ಶಾಸನಗಳು ದೊರೆತಿದ್ದು, ಕರ್ನಾಟಕದ ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಬೌದ್ಧಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಕರ್ನಾಟಕದ ಭೂಭಾಗಗಳಲ್ಲಿ ಕಂಡುಬಂದಿದ್ದು, ಅವುಗಳ ಅಧ್ಯಯನದಿಂದ ಕಾಲಮಾನಿಕವಾಗಿ ಹೇಗೆ ಬೌದ್ಧಧರ್ಮ ಹಂತ ಹಂತವಾಗಿ ಬೆಳವಣಿಗೆಯಾಯಿತು ಎಂಬುದನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೇ  ಬೌದ್ಧಧರ್ಮಕ್ಕೆ ಪ್ರೋತ್ಸಾಹ ನೀಡಿದ ವ್ಯಕ್ತಿಗಳು, ಆ ಕಾಲಮಾನದ ಸಾಮಾಜಿಕ, ಆರ್ಥಿಕ, ರಾಜಕೀಯ, ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

**ಪರಾಮರ್ಶನ ಗ್ರಂಥಗಳು**


- ಶ್ರೀಕಂಠಶಾಸ್ತ್ರೀ, ಎಸ್ . *ಭಾರತೀಯ ಸಂಸ್ಕೃತಿ.*
- ಚಿದಾನಂದಮೂರ್ತಿ, ಎಂ. (1966) *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಮೈಸೂರು
- Rhys Davids , *Buddhist India* .
- ಕಪಟರಾಳ ಕೃಷ್ಣರಾಯ, (1970) *ಕರ್ನಾಟಕ ಸಂಸ್ಕೃತಿಯ ಸಂಶೋಧನೆ.* ಮೈಸೂರು
- ಬಸವರಾಜ, ಎಲ್. (2002). *ಬುದ್ಧಚರಿತೆ.* ಲೋಹಿಯಾ ಪ್ರಕಾಶನ.


**ಕೊನೆ ಟಿಪ್ಪಣಿಗಳು**

[1] ತಾಳ್ತಜೆ ವಸಂತಕುಮಾರ್. (2015). *ಬೌದ್ಧಾಯನ.* ಪ್ರಿಯದರ್ಶಿನಿ ಪ್ರಕಾಶನ. ಪುಟ ಸಂಖ್ಯೆ 4 ಮತ್ತು 5

[2] ಮೇಲಿನದೇ., ಪುಟ– 228,229

[3] ಪಾಠಾಂತರ, 'ಅಂಬಿಕೆಯೆಂದು' ಮೈಸೂರು ಪ್ರಾಚ್ಯ ಕೋಶಾಗಾರದ ಶೂನ್ಯಸಂಪಾದನೆಯ ಹಸ್ತಪ್ರತಿ, ಪುಟ. 154,

[4] ಜಯದೇವಿ ಗಾಯಕವಾಡ. (2001). *ಬೌದ್ಧ ವಿದ್ಯಾ ಕೇಂದ್ರ ಸನ್ನತಿ ಒಂದು ಅಧ್ಯಯನ.* ಗುಲ್ಬರ್ಗ